

# ಚೆಲ್ಲಾಪಿಲ್ಲಿಯಾಗುತ್ತಿರುವ ಮನಸ್ಸು

ಮೂಲ:
ಜೋಗಿಂದರ್ ಸಿಂಹ ನಿರಾಲಾ
ಕನ್ನಡಕ್ಕೆ:
ಡಿ.ಎನ್. ಶ್ರೀನಾಥ್

ಇಂದು ಅವನು ಬಹುಶಃ ಸ್ವಲ್ಪ ಮೊದಲೇ ಬಂದಿದ್ದ. ಇನ್ನೂ ಸಾಕಷ್ಟು ಸಮಯವಿತ್ತು. ಇನ್ನೂ ನಾನೂವಿನ ಬೀಡಾ ಅಂಗಡಿ ಸಹ ತೆರೆದಿರಲಿಲ್ಲ. ಈ ಬೀಡಾ ಅಂಗಡಿಯವನು ಸಹ ವಿಚಿತ್ರ ಪ್ರಾಣಿಯಾಗಿದ್ದಾನೆ, ಬಹುಶಃ ಯು.ಪಿ.ಯವನಿರಬೇಕು. ಅವನು ಮಾಡುವ ಬೀಡಾ ಅದ್ಭುತ! ಅವನು ಅಂಗಡಿಗೆ ಬಂದು ವೀಳ್ಯದೆಲೆಗಳನ್ನು ನೀರಿನಿಂದ ತೊಳೆಯುತ್ತಾನೆ. ಆ ಹಸುರು ಎಲೆಗಳ ಬಣ್ಣವನ್ನು ನೋಡಿ ಅವನೇ ಖುದ್ದು ಅಮಲಿಗೊಳಗಾಗುತ್ತಾನೆ. ಅವನು ಮೊದಲು ತಾನು ತಿನ್ನಲೋಸುಗ ಬೀಡಾ ತಯಾರಿಸಿಕೊಳ್ಳುತ್ತಾನೆ. ಅವನು ಬೀಡಾ ಮಾಡುವಾಗ ತನ್ನ ಗಿರಾಕಿಗಳನ್ನು ಗಮನಿಸುತ್ತಿರುತ್ತಾನೆ. ಅವನ ಅಂಗಡಿಯಲ್ಲಿನ ಗೋಡೆಯ ಮೇಲೆ ಇದುವರೆಗೆ ಆಡಳಿತದಲ್ಲಿದ್ದ ಎಲ್ಲಾ ಪ್ರಧಾನಮಂತ್ರಿಗಳ ಫ್ರೇಮು ಹಾಕಿದ ಫೋಟೊಗಳು ರಾರಾಜಿಸುತ್ತಿವೆ. ಅಂದು ಅವನಲ್ಲಿ ಈ ಬಗ್ಗೆ ಕಾರಣ ಕೇಳಿದಾಗ ಅವನು ಹಳದಿ ಎಲೆಗಳ ಬೀಡಾದ ರಸವನ್ನು ಪಿಚಕಾರಿಯಂತೆ ಹಾರಿಸುತ್ತಾ ಹೇಳಿದ, ‘ಅಣ್ಣಾವ್ರೆ, ಇವೆಲ್ಲವೂ ರಾಜಕೀಯದ ಚಮತ್ಕಾರ. ಒಂದು ವೇಳೆ ನಾವು ಈ ಮುಖಂಡರ ಫೋಟೊಗಳನ್ನು ಹಾಕದಿದ್ದರೆ, ಪೊಲೀಸರು ನಮಗೆ ಈ ಪೇಟೆಯಲ್ಲಿ ಉಳಿಯಲು ಬಿಡುತ್ತಿದ್ದರೆ!’

ಅವನು ರಾಜಧಾನಿಗೆ ಬಂದು ಶುದ್ಧ ಪಂಜಾಬಿ ಮಾತನಾಡುತ್ತಿದ್ದಾನೆ. ವ್ಯಾಪಾರಿಯ ಭಾಷೆ ಅವನ ಗಿರಾಕಿಗಳನ್ನು ಅವಲಂಬಿಸಿದೆ, ಗಿರಾಕಿಗೆ ತಕ್ಕಂತೆ ಅವರ ಭಾಷೆಯಲ್ಲಿ ವ್ಯವಹರಿಸಬೇಕಾಗುತ್ತದೆ. ಇಲ್ಲಿಗೆ ಪಂಜಾಬಿ ಗ್ರಾಹಕರು ತುಂಬಾ ಜನ ಬರ್‍ತಾರೆ. ಟ್ರಕ್ ಡ್ರೈವರ್‌ಗಳು, ಕಂಡಕ್ಟರ್‌ಗಳು ಮತ್ತು ಟ್ಯಾಕ್ಸಿವಾಲರಿಗೆ ಇಲ್ಲಿ ಮಾಲು ಅಗ್ಗದಲ್ಲಿ ಸಿಗುತ್ತದೆ, ಅಲ್ಲದೆ ಈ ಪ್ರದೇಶ ನಗರದಿಂದ ಸಾಕಷ್ಟು ದೂರದಲ್ಲಿದೆ, ಇದರಿಂದಾಗಿ ಪೊಲೀಸರ ಭಯ ಅಷ್ಟೊಂದು ಇರುವುದಿಲ್ಲ.

ಅವನು ಮದ್ಯದ ಗುತ್ತಿಗೆದಾರ ಚೌಧರಿ ಇದೀಗ ತಾನೇ ಶಟರ್ ಮುಚ್ಚಿ ಗೊರಕೆ ಹೊಡೆಯುತ್ತಿರುವುದನ್ನು ನೋಡಿದ. ತಡ ರಾತ್ರಿಯವರೆಗೆ ದಂಧೆ ನಡೆಯುವುದರಿಂದ ಈ ಪೇಟೆಯ ಜನ ಹಗಲಿಡೀ ನಿದ್ರಿಸುತ್ತಾರೆ. ಚೌಧರಿ ತುಂಬಾ ಗಡಿಬಿಡಿ ಮನುಷ್ಯ. ಅವನಿಗೆ ಅವನ ಆಪಾದಮಸ್ತಕ ಗೆಳೆಯರಿದ್ದಾರೆ. ಪ್ರತಿ ವರ್ಷ ಮದ್ಯದ ಎಲ್–1... ಎಲ್–2 ಗುತ್ತಿಗೆ ಹಿಡಿಯುವುದು... ಅಲ್ಲದೆ ಈ ಪ್ರದೇಶದಲ್ಲಿ